# ಅನುಗಾಲವು ಚಿಂತೆ ಜೀವಕ್ಕೆ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru. Here, for this particular song, the authors claim that it has been taken from the Talegere.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The lyrics mentioned without highlights are as per Ref. 1 and the lyrics given in yellow highlights are as per Ref. 2. The lyrics in Ref. 3 are similar to Ref. 2 except few differences which are given in green highlights.
5. **Note:** The lyrics given in the book mentioned in Ref. 2 above are almost similar to that of the singer. They are given in yellow highlights. But, the lyrics are different in the book mentioned in Ref. 1 above. They are given separately without highlights.
6. **Note:** The Ankita are different in these versions. We have considered Ref.1 as standard and taken that Ankita for listing.
7. **Note:** The singer has followed a combination of wordings of Ref. 2 and Ref. 3

| | |
|---|---|
| ರಾಗ ಕಾನಡ ತಾಳ ಅಟ | ರಾಗ ಪೂರ್ವಿ ತಾಳ ಅಟ |
| | |
| ಅನುಗಾಲವು ಚಿಂತೆ ಜೀವಕ್ಕೆ ತನ್ನ | ಅನುಗಾಲವು ಚಿಂತೆ ಮನುಜಗೆ |
| ಮನವು ಶ್ರೀರಂಗನೊಳ್ ಮೆಚ್ಚುವ ತನಕ ‖ ಪ ‖ | ಮನಹೋಗಿ ಮಾಧವನ ಒಡಗೂಡುವನಕ |
| | |
| ಸತಿಯು ಇದ್ದರು ಚಿಂತೆ, ಸತಿಯು ಇಲ್ಲದ ಚಿಂತೆ | ಹೆಂಡಿರಿದ್ದರು ಚಿಂತೆ ಹೆಂಡಿರಿಲ್ಲದ ಚಿಂತೆ |
| ಮತಿಹೀನ ಸತಿಯಾದರು ಚಿಂತೆಯು | ಕೊಂಡು ಕುರೂಪಿಯಾದರು ಚಿಂತೆಯು |
| ಪೃಥಿವಿಯೊಳಗೆ ಸತಿ (ಅತಿ) (ಕಡು) ಚೆಲ್ವೆಯಾದರೆ | ತೊಂಡನಾಗಿ ತಿರುಗಿ ತುತ್ತ ತರುವ ಚಿಂತೆ |
| ಮಿತಿ ಮೀರೆಯಿಲ್ಲದ ಮೋಹದ ಚಿಂತೆ ‖ 1 ‖ | ಮಂಡೆ ಬೀಳುವತನಕ ಚಿಂತೆ ಕಾಣಣ್ಣಾ |
| | |
| ಪುತ್ರರಿದ್ದರು ಚಿಂತೆ ಪುತ್ರರಿಲ್ಲದ ಚಿಂತೆ | ಬಡವನಾದರೂ ಚಿಂತೆ ಬಲ್ಲಿದನಾದರೂ ಚಿಂತೆ |
| ಅತ್ತು ಅನ್ನಕೆ ಕಾಡುವ ಚಿಂತೆಯು | ಕೊಡಧನ ಕೈ ಯೊಳಿದ್ದರು ಚಿಂತೆಯು |
| ತುತ್ತಿನ ಆಸೆಗೆ ತುರುಗಳ ಕಾಯ್ದರು | ಬಡವನಾಗಿ ತಿರುಗಿ ತುತ್ತ ತರುವ ಚಿಂತೆ |
| ಸುತ್ತೇಳು ಕಡೆಯಿಲ್ಲದ ಚಿಂತೆಯು ‖ 2 ‖ | ಪೊಡವಿಯೊಳಿಲ್ಲದ ಚಿಂತೆ ಕಾಣಣ್ಣಾ |

(ಮಕ್ಕಳಿಲ್ಲದ ಚಿಂತೆ ಮಕ್ಕಳಾದರು ಚಿಂತೆ
ಒಕ್ಕಾಳು ಹೊನ್ನು ಕೊಡುವ ಚಿಂತೆಯು
ಅಕ್ಕರೆಯಿಂದಲೆ ತುರುಗಳ ಕಾಯ್ದರು
ಕಕ್ಕುಲತೆಯು ಬಿಟ್ಟು ಹೋಗದ ಚಿಂತೆ || 2 ||)

ಬಡವನಾದರು ಚಿಂತೆ ಬಲ್ಲಿದನಾದರು ಚಿಂತೆ
ಹಿಡಿ ಹೊನ್ನು ಕೈಯೊಳಿದ್ದರು ಚಿಂತೆಯು
ಪೊಡವಿಯೊಳಗೆ ಸಿರಿ ಪುರಂದರ ವಿಠಲನ
ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ || 3 ||

ಮನೆಯಿದ್ದರೂ ಚಿಂತೆ ಮನೆಯಿಲ್ಲದ ಚಿಂತೆ
ಮನೆ ಭಾರವತಿಯಾದರು ಚಿಂತೆಯು
ಮನಸಿಜನಯ್ಯ ಶ್ರೀ ಪುರಂದರ ವಿಠ್ಠಲನ
ನೆನೆದರೆ ಚಿಂತೆಯೆ ಇಲ್ಲ ಕಾಣಣ್ಣಾ

(ಬಡವನಾದರು ಚಿಂತೆ ಬಲಿದಾನದರು ಚಿಂತೆ
ಹಿಡಿ ಹೊನ್ನು ಕೈಯೊಳಾದರು ಚಿಂತೆಯು
ಪೊಡವಿಯೊಳಗೆ ನಮ್ಮ ಪುರಂದರ ವಿಠ್ಠಲನ
ಬಿಡದೆ ಧ್ಯಾನಿಸಿದರೆ ಚಿಂತೆ ನಿಶ್ಚಿಂತೆ || 3 ||)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ದೇವರು ತನ್ನ ಭಕ್ತನ ಎಂತಹ ಪಾಪಗಳನ್ನಾದರೂ ಕ್ಷಮಿಸಿ ಪೊರೆಯುತ್ತಾನೆ ಎಂಬ ಶ್ರದ್ಧೆಯನ್ನು ದಾಸರು ಇಲ್ಲಿಯ ಹಾಡುಗಳಲ್ಲಿ ಮೂಡಿಸಿದ್ದಾರೆ

**ಮತಿಹೀನೆ ಸತಿ** – ವಿವೇಕವಿಲ್ಲದ ಹೆಂಡತಿ.

**ಬಲ್ಲಿದ** – ಹಣವಂತ; ಬಲವುಳ್ಳವ.

**ಅನುಗಾಲ** = ಯಾವಾಗಲೂ

**ಕೊಂಡು** = ಅತಿಯಾಗಿ, ಹೆಚ್ಚಾಗಿ

**ತುತ್ತು** = ಆಹಾರ

**ಕೊಡಧನ** = ಕೊಡತುಂಬ ದ್ರವ್ಯ

**ಮನಸಿಜ** = ಕಾಮ

**Classification:** Keerthane
**Ankita:** sri purandara vittala
**Location:** Srirangam, TN
**Category:** Jeevana Darshana

**Sub-Category:** Vishnu, chinte, patni, jiva, badava, bhumi, srimantha, kaadu, Madhava, maga, anna, rokka, kai, makkalu, bangara, mane, mana, Dhyana,

**Pravachana:** NA

**Explanation:** NA